ಮಂಜೂರಾದ ರಾಷ್ಟ್ರೀಯ ಹೆದ್ದಾರಿಗಳ ಉದ್ದ.

352-ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಮ್ಮ ರಾಜ್ಯಕ್ಕೆ ಭಾರತ ಸರ್ಕಾರದಿಂದ ಇತ್ತೀಚೆಗೆ ಮಂಜೂರಾದ ರಾಷ್ಟ್ರೀಯ ಹೆದ್ದಾರಿಗಳ ಒಟ್ಟು ಉದ್ದ ಎಷ್ಟು (ಕಿ.ಮೀ. ಗಳಲ್ಲಿ)

ಆ) ಬೈಪಾಸ್ ರಸ್ತೆಗಳು ಸೇರಿದಂತೆ ರಸ್ತೆಗಳ ಅಂದಾಜು ವೆಚ್ಚವೆಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಯಾವುದೂ ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಸೂಳೆಕೋಟಿ ಹತ್ತಿರ ಸೇತುವೆ ಕೆಲಸ

451-ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ): ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕಿನ ಸೂಳೆಕೋಟಿ ಹತ್ತಿರ ಒಂದು ಸೇತುವೆ ಕಟ್ಟಲು ಮಂಜೂರಾಗಿದ್ದು ಸುಮಾರು 20 ಲಕ್ಷ ರೂ.ಗಳು ಖರ್ಚಾಗಿದ್ದು ಇನ್ನೂ ಅರ್ಧ ಕೆಲಸ ಹಾಗೆಯೇ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ ಅದಕ್ಕೆ ಕಾರಣಗಳೇನು? ಮತ್ತು ಅದನ್ನು ಯಾವಾಗ ಪೂರೈಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಬಂದಿದೆ.

ಆ) ಜಿಲ್ಲಾಪರಿಷತ್‌ಗೆ ಈ ಕೆಲಸವನ್ನು 1987ರಲ್ಲಿ ಹಸ್ತಾಂತರಿಸಿದ್ದು, ಸಾಕಷ್ಟು ಅನುದಾನವಿಲ್ಲದಿದ್ದ ಕಾರಣ ಹಾಗೂ ಕೂಡುರಸ್ತೆಯ ಭೂ ಸ್ವಾಧೀನದಲ್ಲಿ ವಿಳಂಬವಾದುದರಿಂದ ಸೇತುವೆಯ ಕಾರ್ಯವನ್ನು ಮುಂದುವರೆಸಿರಲಿಲ್ಲ. ಜಿಲ್ಲಾ ಪರಿಷತ್‌ನಿಂದ ಈ ದೊಡ್ಡ ಮೊತ್ತದ ಕಾಮಗಾರಿಯನ್ನು ನಿರ್ವಹಿಸುವುದು ಸಾಧ್ಯವಿಲ್ಲವೆಂಬುದನ್ನು ಉನ್ನತಾಧಿಕಾರ ಸಮಿತಿಯು ನಿರ್ಣಯಿಸಿ ದಿನಾಂಕ 12.6.91 ರಲ್ಲಿ ಲೋಕೋಪಯೋಗಿ ಇಲಾಖೆಗೆ ವಹಿಸಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯ ನಿರ್ಮಾಣ ನಿಗಮದವರಿಗೆ ಕಾಮಗಾರಿಯನ್ನು 91-92ರಲ್ಲಿ ವಹಿಸಲಾಗಿದ್ದು, ಅನುದಾನವನ್ನು ಅನುಸರಿಸಿ 93-94ರ ಅವಧಿಯಲ್ಲಿ ಪೂರ್ಣಗೊಳಿಸುವ ಕಾರ್ಯಕ್ರಮವಿದೆ.

ತ್ಯಾಮಗೊಂಡ್ಲು ಕಳಘಟ್ಟ ರಸ್ತೆಯಲ್ಲಿರುವ ಕಾಸ್‌ವೇ ನಿರ್ಮಾಣ ಕಾರ್ಯ.

68-ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು ಕೆಳಘಟ್ಟ ರಸ್ತೆಲ್ಲಿರುವ ಕಾಸ್‌ವೇ ಬಹಳ ದಿನಗಳಿಂದ ನಿರ್ಮಾಣವಾಗದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಸಂಬಂಧ ಸರ್ಕಾರದಿಂದ ತೆಗೆದುಕೊಂಡ ಕ್ರಮವೇನು?

ಇ) ಈ ಕಾಮಗಾರಿಯನ್ನು ಪ್ರಾರಂಭಿಸಲು ಎಷ್ಟು ಕಾಲಾವಕಾಶ ಬೇಕಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):